**ದಿನಾಂಕಃ 10-09-2025** **CC NO. 585/2023(ಪಿ.ಡಬ್ಲು.1)**

**ಇಂದು ದಿನಾಂಕಃ 10-09-2025 ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ C.S. ವಕೀಲರಿಂದಃ-</u>**

ನಾನು ವಿದ್ಯಾಭ್ಯಾಸ ಮಾಡಿಲ್ಲ. ನನಗೆ ಸಹಿ ಮಾಡಲು ಬರುತ್ತದೆ ಎಂದರೆ ಸರಿ. ದೂರನ್ನು ನಾನು ಹೇಳಿದಂತೆ ಪೋಲಿಸರು ಬರೆದಿರುತ್ತಾರೆ. ಬರೇದ ದೂರನ್ನು ನಾನು ಕೊಟ್ಟಿಲ್ಲ ಎಂದರೆ ಸರಿ. ನನ್ನ ಗಂಡ ನಮ್ಮ ಮನೆಗೆ ಮನೆಯ ಅಳಿತನಕ್ಕೆ ಬಂದಿರುತ್ತಾರೆ ಎಂದರೆ ಸರಿ. ಆರೋಪಿತರು ನಮ್ಮ ಸಂಬಂಧಿಕರು ಎಂದರೆ ಸರಿಯಲ್ಲ.

ನನಗೆ ಒಟ್ಟು 9 ಜನ ಮಕ್ಕಳು ಇರುತ್ತಾರೆ. ಅವರ ಹೆಸರು ನಾಗಪ್ಪ, ರಮೇಶ, ಜಗಪ್ಪ, ಸಿದ್ದಪ್ಪ, ಯಲ್ಲಾಲಿಂಗ, ಶಂಕರ, ಜಗ್ಗಮ್ಮ, ಗೀತಾ ಮತ್ತು ಸೈದಮ್ಮ. ವಿಜಯಕುಮಾರರವರ ಸಹ ನನ್ನ ಮಗ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರು ಈಗ ಮೃತಪಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಮಗ ಮೃತಪಟ್ಟು 15-16 ವರ್ಷಗಳು ಆಗಿವೆ. ವಿಜಯಕುಮಾರರವರ ಹೆಂಡತಿಯ ಊರು ಮರ್ಪಳ್ಳಿ. ವಿಜಯಕುಮಾರರವರ ಹೆಂಡತಿ ಹೆಸರು ಮಲ್ಲಮ್ಮ. ವಿಜಯಕುಮಾರರವರಿಗೆ ಇಬ್ಬರು ಮಕ್ಕಳು ಇದ್ದಾರೆ ಎಂದರೆ ಸರಿ. ವಿಜಯಕುಮಾರರವರ ಒಬ್ಬಳು ಹೆಣ್ಣು ಮಗಳಿಗೆ ಮರ್ಪಳ್ಳಿ ಗ್ರಾಮದ ವ್ಯಕ್ತಿಯೊಂದಿಗೆ ಮದುವೆ ಮಾಡಿರುತ್ತಾರೆ ಎಂದರೆ ಸರಿ. ಅವರು ಮರ್ಪಳ್ಳಿ ಗ್ರಾಮದಲ್ಲಿ ವಾಸವಿರುತ್ತಾರೆ ಎಂದರೆ ಸರಿ. ನಮ್ಮ ಕುಟುಂಬಕ್ಕೆ ಒಟ್ಟು 6-7 ಎಕರೆ ಜಮೀನು ಇದೆ. ನನ್ನ ಸೊಸೆ ಇದೆ ನ್ಯಾಯಾಲಯದಲ್ಲಿ ಪಾಲುಗಾರಿಕೆಗಾಗಿ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ನನ್ನ ಸೊಸೆ ಈ ದಿನ ನ್ಯಾಯಾಲಯಕ್ಕೆ ಬಂದು ಹೋಗಿರುತ್ತಾರೆ ಎಂದರೆ ಸರಿ.

ನಮ್ಮ ಊರಿನ ಹಿರಿಯರಾದ ಭೀಮರಾವ ಕುಲಕರ್ಣಿರವರು ಇದ್ದು ಅವರು ಸ್ವಲ್ಪ ತಿಂಗಳ ಹಿಂದೆ ಮೃಪಪಟ್ಟಿರುತ್ತಾರೆ ಎಂದರೆ ಸರಿ. ನಮ್ಮ ಊರಿನ ದಳಪತಿಯಾದ ದೇಸಾಯಿರವರು ಇರುತ್ತಾರೆ ಎಂದರೆ ಸರಿ. ರಾಮರಾವ ಪಾಟೀಲರವರು ನಮ್ಮ ಊರಿನವರು ಎಂದರೆ ಸರಿ. ಮೇಲಿನ ವ್ಯಕ್ತಿಗಳೆಲ್ಲ ಊರಿನಲ್ಲಿ ಪಂಚಾಯಿತಿ ಅಥವಾ ರಾಜೀ ಸಂದಾನ ಮಾಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿ ಪರ ವಕೀಲರು ಸಾಕ್ಷಿಗೆ ನಿಮ್ಮ ಊರಿನಲ್ಲಿ ನನಗೆ ನೋಡಿದ್ದಿರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಆರೋಪಿ ಪರ ವಕೀಲರು ನನ್ನ ಮತ್ತು ಶ್ಯಾಮರಾವರವರ ಮಧ್ಯ ಜಗಳವಾದಾಗ ಭೀಮರಾವ ಕುಲಕರ್ಣಿರವರ ಮನೆಯಲ್ಲಿ ಪಂಚಾಯಿತಿ ಮಾಡಿರುತ್ತೇನೆ ಎಂದರೆ ಸರಿ. ನನ್ನ ಮಗ ಯಲ್ಲಪ್ಪರವರು ಶ್ಯಾಮರಾವರವರ ಮಗಳೊಂದಿಗೆ ಓಡಿ ಹೋಗಿರುತ್ತಾರೆ ಎಂದರೆ ಸರಿ. ಆದ್ದರಿಂದ ಶ್ಯಾಮರಾವರವರು ನನ್ನ ಹಾಗೂ ನನ್ನ ಮಗನ ವಿರುದ್ದ ದೂರನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಆದ ಕಾರಣ ಭೀಮರಾವ ಕುಲಕರ್ಣಿರವರ ಮನೆಯಲ್ಲಿ ಪಂಚಾಯಿತಿ ಆಗಿದ್ದು ಆಗ ಆರೋಪಿತರ ಪರ ವಕೀಲರು ಸಹ ಅಲ್ಲಿ ಇದ್ದರು ಎಂದು ಸೂಚಿಸಿದಾಗ ಸಾಕ್ಷಿ ಸರಿ ಎಂದು ನುಡಿಯುತ್ತಾರೆ. ಪಂಚಾಯಿತಿಯಲ್ಲಿ ನನ್ನ ಮಗನಿಗೆ ನಾನು ಕರೆದುಕೊಂಡು ಹೋಗಿರುತ್ತೇನೆ ಮತ್ತು ಅವರ ಮಗಳಿಗೆ ಅವರ ತಂದೆ ತಾಯಿ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿ. ಸದರಿ ಹೆಣ್ಣು ಮಗಳಿಗೆ ಈಗ ಬೇರೆ ಅವರೊಂದಿಗೆ ಮದುವೆ ಮಾಡಿರುತ್ತಾರೆ ಎಂದರೆ ಸರಿ.

ನಮ್ಮ ಊರಿನ ನಾಗಪ್ಪ ತಂದೆ ಸೈಬಣ್ಣರವರು ನನಗೆ ಗೊತ್ತು. ಸದರಿ ನಾಗಪ್ಪರವರಿಗೆ 4 ಜನ ಮಕ್ಕಳು ಎಂದರೆ ಸರಿ. ನನ್ನ ಮಗ ಸಿದ್ದಪ್ಪ ನಾಗಪ್ಪನ ಹೆಂಡತಿಯೊಂದಿಗೆ ಓಡಿ ಹೋಗಿರುತ್ತಾನೆ ಎಂದರೆ ಸರಿ. ಅವರು ಪೋಲಿಸ ದೂರು ನೀಡಿದಾಗ ಮೇಲೆ ಹೇಳಿದ ವ್ಯಕ್ತಿಗಳೇ ಮತ್ತೆ ರಾಜೀ ಸಂದಾನ ಮಾಡಿರುತ್ತಾರೆ ಎಂದರೆ ಸರಿ. ನನ್ನ

ಮಗನಾದ ಯಲ್ಲಪ್ಪ ಪಕ್ಕದ ಮನೆಯವರಾದ ಪಾಂಡುರವರ ಹೆಂಡತಿ ಲಕ್ಷ್ಮೀರವರಿಗೆ ಕೇಣಕಿರುತ್ತಾನೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಇದರ ವಿಷಯ ಸಹ ರಾಜೀ ಸಂದಾನವಾಗಿರುತ್ತದೆ ಎಂದರೆ ಸರಿ.

2ನೇ ಆರೋಪಿಯ ಹೆಂಡತಿ ಜೀವಂತ ಇರುವ ಬಗ್ಗೆ ನನಗೆ ಗೊತ್ತಿಲ್ಲ. 2ನೇ ಆರೋಪಿಯ ಹೆಂಡತಿ ಮೃತಪಟ್ಟಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 2ನೇ ಆರೋಪಿಗೆ ಇಬ್ಬರು ಮಕ್ಕಳು ಇರುತ್ತಾರೆ ಎಂದರೆ ಸರಿ. ನನ್ನ ಮಗನಾದ ಶಂಕರರವರು 2ನೇ ಆರೋಪಿಯ ಹೆಂಡತಿಯೊಂದಿಗೆ ಅಕ್ರಮ ಸಂಬಂಧ ಇಟ್ಟುಕೊಂಡಿರುತ್ತಾನೆ ಎಂದರೆ ಸರಿಯಲ್ಲ. ಇದರ ವಿಷಯ 2ನೇ ಆರೋಪಿಗೆ ಹಾಗೂ 2ನೇ ಆರೋಪಿಯ ತಾಯಿಗೆ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. 2ನೇ ಆರೋಪಿ ತಾಂಡೂರಿನಲ್ಲಿ ಪಾಲೀಸ ಮಷೀನನಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿ. 2ನೇ ಆರೋಪಿಯ ತಾಯಿ ಸಹ ತಾಂಡೂರಿನಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 3ನೇ ಆರೋಪಿ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿ. 4 ಮತ್ತು 5ನೇ ಆರೋಪಿತರು ಸುಲೇಪೇಟ ಗ್ರಾಮದವರು ಎಂದರೆ ಸರಿ. 2ನೇ ಆರೋಪಿ ಹಾಗೂ 2ನೇ ಆರೋಪಿಯ ತಾಯಿ ನಿಮ್ಮ ಮಗನಿಗೆ ಬುದ್ದಿ ಹೇಳಿ ಎಂದು ನಮ್ಮ ಮನೆಗೆ ಬಂದಾಗ ನನ್ನ ಮಗನಾದ ಶಂಕರರವರಿಗೆ ಬೆಂಗಳೂರಿಗೆ ಕಳುಹಿಸಿಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

2ನೇ ಆರೋಪಿ ತಾಂಡೂರಿನಲ್ಲಿ ಇದ್ದ ಕಾರಣ ನನ್ನ ಮಗನಾದ ಶಂಕರರವರು ಮತ್ತೆ 2ನೇ ಆರೋಪಿಯ ಹೆಂಡತಿಯೊಂದಿಗೆ ಅಕ್ರಮ ಸಂಬಂಧ ಮುಂದುವರೆಸಿರುತ್ತಾನೆ ಎಂದರೆ ಸರಿಯಲ್ಲ. ಇದರ ವಿಷಯ ಊರಿನಲ್ಲಿ ಗೊತ್ತಾದ ಕಾರಣ ಮತ್ತು 2ನೇ ಆರೋಪಿ ಹಾಗೂ ಅವನ ತಾಯಿ ಬೈದಿರುವ ಕಾರಣ 2ನೇ ಆರೋಪಿಯ ಹೆಂಡತಿ ಆತ್ಮಹತ್ಯೆ ಮಾಡಿಕೊಂಡಿರುತ್ತಾಳೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಿನಾಂಕ 15-05-2023ರಂದು 2ನೇ ಆರೋಪಿಯ ಹೆಂಡತಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುತ್ತಾನೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 2ನೇ ಆರೋಪಿಯ ಮನೆಯ ಹಿಂದೆ ನಮ್ಮ ಮನೆ ಇದೆ. 2ನೇ ಆರೋಪಿಯ ಹೆಂಡತಿ ಮೃತಪಟ್ಟಾಗ ಊರಿನಲ್ಲಿ ಪಂಚಾಯಿತಿ ಮಾಡಿರುತ್ತಾರೆ ಎಂದರೆ ಸಾಕ್ಷಿ ತೋಟದಲ್ಲಿ ಪಂಚಾಯಿತಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಪಂಚಾಯಿತಿಯಲ್ಲಿ ಮೇಲೆ ಹೇಳಿದ ಪಂಚರು ಹಾಗೂ ಊರಿನ ಹಿರಿಯ ವ್ಯಕ್ತಿಗಳು ಪಂಚಾಯಿತಿ ಮಾಡಿ ನಮಗೆ 6 ಲಕ್ಷ ದಂಡ ವಿಧಿಸಿರುತ್ತಾರೆ ಎಂದರೆ ಸಾಕ್ಷಿ ಅದನ್ನು ನಾವು ಒಪ್ಪಿರುವುದಿಲ್ಲ ಎಂದು ನುಡಿಯುತ್ತಾರೆ. ದಂಡ ನೀಡಲು ನಾವು ಒಪ್ಪಿಕೊಂಡ ಕಾರಣ 2ನೇ ಆರೋಪಿಯ ಹೆಂಡತಿಯ ಅಂತ್ಯಸಂಸ್ಕಾರ ಮಾಡಿರುತ್ತಾರೆ ಎಂದರೆ ಸಾಕ್ಷಿ ನಾವು ಒಪ್ಪಿಕೊಂಡಿರುವುದಿಲ್ಲ ಮತ್ತು ರಾಮೇಗೌಡರು ನನ್ನ ಮಗನಿಗೆ ಒಂದು ಏಟು ಹೊಡೆದು ಒಪ್ಪಿಸಿರುತ್ತಾರೆ ಎಂದು ನುಡಿಯುತ್ತಾರೆ. ಈ ರೀತಿ ರಾಮೇಗೌಡರು ಹೊಡೆದಿರುವ ಬಗ್ಗೆ ನಾನಾಗಲಿ ನನ್ನ ಮಗನಾಗಲಿ ದೂರನ್ನು ನೀಡಿರುವುದಿಲ್ಲ.

ಮುಂದುವರೆದು ವಾಟೀ ಸವಾಲು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

C/C ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಚಿಂಚೋಳಿ